**EP 228-23 CW.1**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 02.05.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ D.hr ಪರವಾಗಿ, N J N ವಕೀಲರಿಂದಃ**

6. Annexure -4 ರಲ್ಲಿ ತೋರಿಸಿದಂತಹ ರಾಘವ ರೆಡ್ಡಿ ಭಾಡಿಗೆದಾರನಿರುವ ಕಟ್ಟಡ YOKOHAMA Tyre Godown ಮುರು ವರ್ಷಗಳ ಹಿಂದೆ ಕೆಡವಿ ಹೊಸ ಕಟ್ಟಡಲಾಗಿದೆ ಎಂದು ವರದಿಯಲ್ಲಿ ಹೇಳಿದ್ದೇನೆ ಅಂದರೆ ಸರಿ. ಸದರಿ ಕಟ್ಟಡವನ್ನು ಮೂರು ವರ್ಷಗಳ ಹಿಂದೆ ಕೆಡವಿ ಕಟ್ಟಿದ ಕಟ್ಟಡದ ಪರವಾನಿಗೆಯನ್ನು ಮಹಾನಗರ ಪಾಲಿಕೆಯವರು ಕೊಟ್ಟಿದ್ದನ್ನು ಪ್ರಲ್ಲಾದಗೌಡ ರವರು ದಾಖಲೆ ಕೊಟ್ಟಿಲ್ಲ. ನಾನು ಖುದ್ದಾಗಿ ಬಾಹ್ಯವಾಗಿ ಕಟ್ಟಡವನ್ನು ಮೂರು ವರ್ಷಗಳ ಹಿಂದೆ ಕೆಡವಿ ಕಟ್ಟಿರಬಹುದೆಂದು ಅಭಿಪ್ರಾಯಪಟ್ಟಿದ್ದೇನೆ.

7. ನಾನು ನನ್ನ ಕಮೀಶನರ ರವರದಿಯಲ್ಲಿ ಹೇಳಿರುವಂತೆ ಯಾವ ಯಾವ ಕಟ್ಟಡದ ನವೀಕರಣ ಶೇಕಡಾವಾರಿಗೆ ಸಂಬಂಧಪಟ್ಟಂತೆ ಯಾವುದೇ ದಾಖಲೆಗಳಿಲ್ಲ. ನಾನು ಬಾಹ್ಯವಾಗಿ ನೋಡಿ ಅಭಿಪ್ರಾಯಪಟ್ಟಿದ್ದೇನೆ ಅಂದರೆ ಸರಿ. ಪ್ರಲ್ಲಾದಗೌಡ ರವರ ಮಾತು ಕೇಳಿ ಅವರಿಗೆ ಅನುಕೂಲ ಮಾಡಲು ವರದಿ ನೀಡಿದ್ದೇನೆ ಅಂದರೆ ಸರಿಯಲ್ಲ. ನನ್ನ ಕಮೀಶನರ ರವರ ವರದಿಯಲ್ಲಿ ಕಟ್ಟಡ ಮೌಲ್ಯ ಪುಟ ನಂಃ 4 ರಲ್ಲಿ 1,35,32,588/- ಕಟ್ಟಡದ ಮೌಲ್ಯ ಇವತ್ತಿನ ದರದ ಪ್ರಕಾರ ಹೊಸದಾಗಿ ಕಟ್ಟಡ ಕಟ್ಟಬೇಕಾದರೆ ತಗಲುವ ನಮ್ಮ ಇಲಾಖೆಯ ಮಾರ್ಗಸೂಚಿಯ ಪ್ರಕಾರ ಇರುತ್ತದೆ. ಕಟ್ಟಡದ ಮೌಲ್ಯದ ಸವಕಳಿಯನ್ನು ಕರ್ನಾಟಕ ಮಹಾನಗರ ಪಾಲಿಕೆ ಕಾಯ್ದೆ -1976 ತಿದ್ದುಪಡಿ -2003 ಕಲಂ-109 ರ ಪ್ರಕಾರ ಅಂದರೆ ಸರಿ. ಕರ್ನಾಟಕ ಮಹಾನಗರ ಪಾಲಿಕೆ ಕಾಯ್ದೆ -1976 ತಿದ್ದುಪಡಿ -2003 ಕಲಂ-109 ರ ಪ್ರಕಾರ ಹಳೇ ಕಟ್ಟಡಗಳ ತೆರಿಗೆ ವಿಧಿಸುವ ಕುರಿತು ಅದಕ್ಕೆ ಸಂಬಂಧಪಟ್ಟಂತೆ ಸವಕಳಿಯನ್ನು ಹೇಗೆ ಅಂದಾಜು ಮಾಡಬೇಕೆಂದು ನೀಡಿದ ಕೋಷ್ಟಕ ಅಂದರೆ ಸರಿ. ಆದರೆ ನಾನು ಸವಕಳಿಯನ್ನು ಮೌಲ್ಯ ಮಾಡಿದ್ದು ಆಗಿನ ಮೈಸೂರು ಸರಕಾರದ ಲೋಕೋಪಯೋಗಿ ಇಲಾಖೆಯ ಕೈಪಿಡಿಯ ಪ್ರಕಾರ ಮಾಡಿದ್ದೇನೆ. ನಾನು ಮೈಸೂರು ಸರಕಾರದ ಲೋಕೋಪಯೋಗಿ ಇಲಾಖೆಯ ಕೈಪಿಡಿಯಂತೆ ಸವಕಳಿಯನ್ನು ಮೌಲ್ಯ ಮಾಡಿಲ್ಲ ಅಂದರೆ ಸರಿಯಲ್ಲ. ಕೈಪಿಡಿಯನ್ನು ನ್ಯಾಯಾಲಯಕ್ಕೆ ಹಾಜರಪಡಿಸಿಲ್ಲ ಅಂದರೆ ಸರಿ.

**EP 228-23** **CW.1**

ನಾವು ಸಲ್ಲಿಸಿದ ವರದಿ ತಪ್ಪು ಇದೆ ಎಂದು ಕಂಡುಬರುತ್ತದೆ ಎಂದು ಕೈಪಿಡಿಯನ್ನು ಉದ್ದೇಶಪೂರ್ವಕವಾಗಿ ಹಾಜರಪಡಿಸಿಲ್ಲ ಅಂದರೆ ಹಾಜರಪಡಿಸುತ್ತೇನೆಂದು ಹೇಳುತ್ತಾರೆ. ಆದರೆ ಈಗ ಅದನ್ನು ಹಾಜರಪಡಿಸಿಲ್ಲ. ರೂ. 74,04,491/- ರೂ. ಕಟ್ಟಡದ ಮೌಲ್ಯ ಆಗುತ್ತದೆ ಎಂದು ಪ್ರಲ್ಲಾದಗೌಡರಿಗೆ ಅನುಕೂಲ ಮಾಡಲು ಹೇಳಿದ್ದೇನೆ ಅಂದರೆ ಸರಿಯಲ್ಲ. ನವೀಕರಣದ ಮೌಲ್ಯ ರೂ. 47,05,429/- ರೂ. ಇದನ್ನು ಸುಳ್ಳು ತೋರಿಸಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.